# ಕೃಷಿ ಮೇಳದಲ್ಲಿ ರೈತತೀರ್ಪು ಮಾದರಿ ಕಾರ್ಯಕ್ರಮ ಕಡ್ಡಾಯಕ್ಕೆ ಒತ್ತಾಯ

ಹುಬ್ಬಳ್ಳಿ, ನ.26: ಕೃಷಿ ವಿಶ್ವ ವಿದ್ಯಾಲಯಗಳು ಕೈಗೊಳ್ಳುವ ಕೃಷಿಮೇಳ ಹಾಗೂ ಕೃಷಿ ಉತ್ಸವದಲ್ಲಿ ರೈತತೀರ್ಪು ಮಾದರಿ ಕಾರ್ಯಕ್ರಮಗಳನ್ನು ಕಡ್ಡಾಯವಾಗಿ ಕೈಗೊಳ್ಳಬೇಕೆಂದು, ರೈತರ ದುಂಡುಮೇಜಿನ ಸಭೆ ಒತ್ತಾಯಿಸಿದೆ.

ದಕ್ಷಿಣ ಏಷ್ಯಾದಲ್ಲಿ ಕೃಷಿಸಂಶೋಧನೆಯ ಪ್ರಜಾತಾಂತ್ರೀಕರಣ(ಆದರ್ಶ) ಇತ್ತೀಚೆಗೆ ಧಾರವಾಡದಲ್ಲಿ ಆಯೋಜಿಸಿದ್ದ ಧಾರವಾಡ, ಬೆಳಗಾವಿ, ಗದಗ, ಹಾವೇರಿ ಹಾಗೂ ಕೊಪ್ಪಳ ಜಿಲ್ಲೆಗಳ ರೈತ ಸಂಘಟನೆಗಳ ಸಭೆಯಲ್ಲಿ ವಿವಿಧ ವಿಷಯಗಳ ಕುರಿತಾಗಿ ಚರ್ಚಿಸಲಾಯಿತು.

ಕೃಷಿ ವಿಶ್ವವಿದ್ಯಾಲಯಗಳು ಪ್ರತಿ ವರ್ಷ ನಡೆಸುವ ಕೃಷಿ ಮೇಳಗಳಲ್ಲಿ ಹಿಂದಿನ ವರ್ಷ ಕೈಗೊಂಡ ಕೃಷಿ ಸಂಶೋಧನೆ ಕುರಿತ ವಿವರಗಳನ್ನು ರೈತರೊಂದಿಗೆ ಹಂಚಿಕೊಳ್ಳಲು, ಕೃಷಿ ಸಂಶೋಧನೆ ಆದ್ಯತೆ ಹಾಗೂ ಕೃಷಿ ನೀತಿ ನಿರೂಪಣೆ ಮುಕ್ತ ಸಂವಾದ ವ್ಯವಸ್ಥೆ ಕೈಗೊಳ್ಳಬೇಕಾಗಿದೆ ಎಂದು ಸಭೆಯಲ್ಲಿ ಅಭಿಪ್ರಾಯಪಡಲಾಯಿತು.



ರೈತತೀರ್ಪು ರೂವಾರಿ ಆದರ್ಶದ ಸಂಯೋಜಕ ಪಿ.ವಿ.ಸತೀಶ ಮಾತನಾಡಿ, ಕೃಷಿ ಸಂಶೋಧನೆಗಳು ರೈತರ ಬೌದ್ಧಿಕ ಮಟ್ಟಕ್ಕೆ ಮೀರಿದ ವಿಷಯ ಎಂದು ಭಾವಿಸಲಾಗಿದೆ. ಆದರೆ ರೈತತೀರ್ಪು ಕಾರ್ಯಕ್ರಮದ ಮೂಲಕ ರೈತರು ತಾವೂ ಸಹ ಕೃಷಿ ಸಂಬಂಧಿತ ಸಂಶೋಧನೆಗಳನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಲು ಶಕ್ತರು ಎಂದು ತೋರಿಸಿಕೊಟ್ಟಿದ್ದಾರೆ. ದನಿವಂಚಿತರ ಸಾಮರ್ಥ್ಯವನ್ನು ಜಗತ್ತಿಗೆ ತೋರಿಸುವ ರೈತ ತೀರ್ಪು ಐತಿಹಾಸಿಕ ಮಹತ್ವ ಹೊಂದಿದೆ ಎಂದರು. ಧಾರವಾಡ ಗ್ರಾಮೀಣಾಭಿವೃದ್ಧಿ ತಜ್ಞ ಡಾ।ಪ್ರಕಾಶ ಭಟ್ಟ ಮಾತನಾಡಿ, ಆಹಾರ ಸಾರ್ವಭೌಮತ್ವದ ಪರಿಕಲ್ಪನೆಯನ್ನು ವಿವರಿಸಿ ದರು. ಪ್ರಸ್ತುತ ಕೃಷಿ ಕ್ಷೇತ್ರದ ಬಿಕ್ಕಟ್ಟು ಪರಿಹಾರಕ್ಕೆ ಆಹಾರ ಸಾರ್ವಭೌಮತ್ವ ಸಾಧಿಸುವುದು ಪ್ರಮುಖವಾಗಿರುವುದಾಗಿ ತಿಳಿಸಿದರು.

ರೈತತೀರ್ಪು ಸಂಚಾಲನಾ ಸಮಿತಿ ಸದಸ್ಯ ರೈತ ಮುಖಂಡ ಚನ್ನಬಸಪ್ಪ ಕೊಂಬಳಿ, ಧಾರವಾಡದ ಕೃಷಿ ಮಾಧ್ಯಮ ಕೇಂದ್ರದ ಅನಿತಾ ಪೈಲೂರು ರೈತತೀರ್ಪು ಕಾರ್ಯಕ್ರಮ ಕುರಿತಾಗಿ ಅನಿಸಿಕೆ ವ್ಯಕ್ತಪಡಿಸಿದರು.

ಅವಿಭಜಿತ ಧಾರವಾಡ, ಬೆಳಗಾವಿ, ಕೊಪ್ಪಳ ಜಿಲ್ಲೆಗಳಿಂದ ಕಲ್ಲವ್ವ ಹಕ್ಲದ, ಶಿವಗಂಗಮ್ಮ ಹೊಸಮನಿ, ಜೈತಾನುಬಿ ನದಾಫ, ಹೇಮವ್ವ ಲಮಾಣಿ, ಮಾರುತಿ ಹೊಸಮನಿ, ಈರಯ್ಯ ಕಿಲ್ಲೇದಾರ ತಮ್ಮ ಅನುಭವ ಹಂಚಿಕೊಂಡರು.

ರಾಜ್ಯ ರೈತಸಂಘ, ಸಾವಯವ ಕೃಷಿ ಮಿಶನ್, ಕೃಷಿಕ ಸಮಾಜ, ಕೃಷಿ ಪ್ರಯೋಗ ಪರಿವಾರ, ಸರ್ವೋದಯ ಮಹಾಸಂಘ ಸೇರಿದಂತೆ ವಿವಿಧ ರೈತ ಸಂಘಟನೆಗಳ 35 ಪ್ರತಿನಿಧಿಗಳು ಪಾಲ್ಗೊಂಡಿದ್ದರು.